# ನೀಲನಕ್ಷೆ-ಅನುಬಂಧ 1

ವಿಷಯ-ಐಚ್ಛಿಕ ಕನ್ನಡ ತರಗತಿ-ದ್ವಿತೀಯ ಪಿಯುಸಿ

<table>
<tr><th rowspan="2">ಪದ್ಯ</th><th rowspan="2">1 ಅಂಕ</th><th colspan="2">2 ಅಂಕ</th><th>3 ಅಂಕ</th><th colspan="2">4 ಅಂಕ</th><th rowspan="2">ಒಟ್ಟು ಅಂಕಗಳು</th></tr>
<tr><th>ಕಿರು ಪ್ರಶ್ನೆ</th><th>ಟಿಪ್ಪಣಿ</th><th>ಕಿರು ಪ್ರಶ್ನೆ</th><th>ವಿವರ ಪ್ರಶ್ನೆ</th><th>ಭಾವಾರ್ಥ</th></tr>
<tr><td>1.ಚಂಪೂ</td><td>2</td><td rowspan="3">3</td><td rowspan="3">2</td><td>1</td><td>1</td><td rowspan="3">1</td><td rowspan="6">44</td></tr>
<tr><td>2.ರಗಳೆ</td><td>2</td><td>1</td><td rowspan="2">1</td></tr>
<tr><td>3.ಷಟ್ಪದಿ</td><td>2</td><td>1</td></tr>
<tr><td>4.ಶತಕ</td><td>1</td><td rowspan="3">3</td><td rowspan="3">1</td><td></td><td rowspan="3">2</td><td rowspan="3">1</td></tr>
<tr><td>5.ತ್ರಿಪದಿ</td><td>2</td><td>2</td></tr>
<tr><td>6.ಸಾಂಗತ್ಯ</td><td>2</td><td></td></tr>
<tr><td>7.ಕಥನ ಕವನ</td><td>1</td><td>3</td><td></td><td>2</td><td colspan="2">2</td><td>12</td></tr>
<tr><td>8.ನಾಟಕ</td><td>6</td><td colspan="2">3</td><td>3</td><td colspan="2">2</td><td>20</td></tr>
<tr><td>9.ಅಲಂಕಾರ<br>ಛಂದಸ್ಸು<br>ಅನುವಾದ</td><td>—</td><td colspan="2">—</td><td>—</td><td colspan="2">2<br>2<br>1</td><td>12</td></tr>
<tr><td>10.ಭಾಷಾಭ್ಯಾಸ</td><td>12</td><td colspan="2"></td><td>—</td><td colspan="2">—</td><td>12</td></tr>
<tr><td>ಒಟ್ಟು ಪ್ರಶ್ನೆಗಳು</td><td>30</td><td colspan="2">15</td><td>10</td><td colspan="2">15</td><td>70</td></tr>
<tr><td>ಉತ್ತರಿಸಬೇಕಾದ ಪ್ರಶ್ನೆಗಳು</td><td>30</td><td colspan="2">10</td><td>6</td><td colspan="2">8</td><td>54</td></tr>
<tr><td>ಒಟ್ಟು ಅಂಕಗಳು</td><td>30</td><td colspan="2">20</td><td>18</td><td colspan="2">32</td><td>100</td></tr>
<tr><td>ಹೆಚ್ಚುವರಿ ಪ್ರಶ್ನೆಗಳು</td><td>—</td><td colspan="2">5</td><td>4</td><td colspan="2">7</td><td>16</td></tr>
</table>

ನೀಲನಕ್ಷೆ - ಅನುಬಂಧ-2

ವಿಷಯ-ಐಚ್ಛಿಕ ಕನ್ನಡ — ತರಗತಿ-ದ್ವಿತೀಯ ಪಿಯುಸಿ

| ಪದ್ಯ | 1 ಅಂಕ | 2 ಅಂಕ | | 3 ಅಂಕ | 4 ಅಂಕ | | ಒಟ್ಟು ಅಂಕಗಳು |
|---|---|---|---|---|---|---|---|
| | | ಕಿರು ಪ್ರಶ್ನೆ | ಟಿಪ್ಪಣಿ | ಕಿರು ಪ್ರಶ್ನೆ | ವಿವರ ಪ್ರಶ್ನೆ | ಭಾವಾರ್ಥ | |
| 1.ಚಂಪೂ | 2 | | | 1 | 1 | | |
| 2.ರಗಳೆ | 2 | 3 | 2 | 1 | 1 | 1 | |
| 3.ಷಟ್ಪದಿ | 2 | | | 1 | | | **44** |
| 4ಶತಕ | 1 | | | | | | |
| 5.ತ್ರಿಪದಿ | 2 | 3 | 1 | 2 | 2 | 1 | |
| 6.ಸಾಂಗತ್ಯ | 2 | | | | | | |
| ಒಟ್ಟು ಪ್ರಶ್ನೆಗಳು | **11** | 9 | | 5 | 6 | | |
| ಉತ್ತರಿಸಬೇಕಾದದ್ದು | **11** | 6 | | 3 | 3 | | |
| ಹೆಚ್ಚುವರಿ ಪ್ರಶ್ನೆಗಳು | — | 3 | | 2 | 3 | | |
| ಒಟ್ಟು ಅಂಕಗಳು | **11** | 12 | | 9 | 12 | | |
| ಕಥನ ಕವನ ಭಾಗ ಒಟ್ಟು ಪ್ರಶ್ನೆಗಳು | **1** | 3 | | 2 | 2 | | |
| ಉತ್ತರಿಸಬೇಕಾದದ್ದು | **1** | 2 | | 1 | 1 | | |
| ಹೆಚ್ಚುವರಿ ಪ್ರಶ್ನೆಗಳು | — | 1 | | 1 | 1 | | |
| ಒಟ್ಟು ಅಂಕಗಳು | **1** | 4 | | 3 | 4 | | **12** |
| ನಾಟಕ ಭಾಗ ಒಟ್ಟು ಪ್ರಶ್ನೆಗಳು | **6** | 3 | | 3 | 2 | | |
| ಉತ್ತರಿಸಬೇಕಾದದ್ದು | **6** | 2 | | 2 | 1 | | |
| ಹೆಚ್ಚುವರಿ ಪ್ರಶ್ನೆಗಳು | — | 1 | | 1 | 1 | | |
| ಒಟ್ಟು ಅಂಕಗಳು | **6** | 4 | | 6 | 4 | | **20** |
| ಅಲಂಕಾರ | — | — | | — | 2 | | |
| ಛಂದಸ್ಸು | — | — | | — | 2 | | |
| ಅನುವಾದ | — | — | | — | 1 | | |
| ಒಟ್ಟು ಪ್ರಶ್ನೆಗಳು | — | — | | — | 5 | | |
| ಉತ್ತರಿಸಬೇಕಾದದ್ದು | — | — | | — | 3 | | |
| ಹೆಚ್ಚುವರಿ ಪ್ರಶ್ನೆಗಳು | — | — | | — | 2 | | |
| ಒಟ್ಟು ಅಂಕಗಳು | — | — | | — | 12 | | **12** |
| ಭಾಷಾಭ್ಯಾಸ ಒಟ್ಟು ಪ್ರಶ್ನೆಗಳು | **12** | _ | | — | — | — | |
| ಉತ್ತರಿಸಬೇಕಾದದ್ದು | **12** | _ | | — | — | — | |
| ಹೆಚ್ಚುವರಿ ಪ್ರಶ್ನೆಗಳು | — | _ | | — | — | — | |
| ಒಟ್ಟು ಅಂಕಗಳು | **12** | _ | | — | — | — | **12** |
| | | | | | ಒಟ್ಟು ಅಂಕಗಳು | | **100** |

# ಅನುಬಂಧ–1 (ಅ)

| ಘಟಕಗಳು | ಶೇಕಡಾ ಅಂಕಗಳು |
|---|---|
| ಕಾವ್ಯ | 44 |
| ಕಥನ ಕವನ | 12 |
| ನಾಟಕ | 20 |
| ಅಲಂಕಾರ/ಛಂದಸ್ಸು/ಅನುವಾದ | 12 |
| ಭಾಷಾಭ್ಯಾಸ | 12 |
| ಒಟ್ಟು | 100 |

| ಉದ್ದೇಶಗಳು | ಶೇಕಡಾ ಅಂಕಗಳು |
|---|---|
| ಜ್ಞಾನ | 20 |
| ಗ್ರಹಿಕೆ | 40 |
| ಅಭಿವ್ಯಕ್ತಿ | 22 |
| ಪ್ರಶಂಸೆ | 18 |
| ಒಟ್ಟು | 100 |

| ಕ್ಲಿಷ್ಟತೆ | ಶೇಕಡಾ ಅಂಕಗಳು |
|---|---|
| ಸುಲಭ | 30 |
| ಸಾಧಾರಣ | 50 |
| ಕಠಿಣ | 20 |
| ಒಟ್ಟು | 100 |

| ಪ್ರಶ್ನೆಗಳ ಸ್ವರೂಪ | ಒಟ್ಟು ಪ್ರಶ್ನೆಗಳ ಸಂಖ್ಯೆ | ಉತ್ತರಿಸಬೇಕಾದ ಪ್ರಶ್ನೆಗಳ ಸಂಖ್ಯೆ |
|---|---|---|
| ವಸ್ತುನಿಷ್ಠ | 20 | 20 |
| ಅತಿ ಕಿರು ಉತ್ತರ | 10 | 10 |
| ಕಿರು ಉತ್ತರ | 25 | 16 |
| ವಿವರಣಾತ್ಮಕ ಉತ್ತರ | 15 | 08 |
| ಒಟ್ಟು ಸಂಖ್ಯೆ | 70 | 54 |

# ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ (1) 2022–23

## ವಿಷಯ: ಐಚ್ಛಿಕ ಕನ್ನಡ (16)

ಅವಧಿ: 3 ಗಂಟೆ 15 ನಿಮಿಷ ಅಂಕಗಳು–100

ಅ–ವಿಭಾಗ

**I ಸರಿಯಾದ ಉತ್ತರವನ್ನು ಆಯ್ಕೆ ಮಾಡಿ ಬರೆಯಿರಿ. 1x15=15**

1. 'ವಸನ' ಪದದ ಅರ್ಥ_____
   ಅ) ವ್ಯಸನ
   ಆ) ವಸ್ತ್ರ
   ಇ) ಚಟ
   ಈ) ಮುಖ

2. 'ಶಬರ' ಪದದ ಸಮಾನಾರ್ಥಕ ಪದಗಳು_____
   ಅ) ಕಿರಾತ, ಬೇಡ
   ಆ) ರಾಕ್ಷಸ, ಅಸುರ
   ಇ) ಸುರ, ದೇವತೆ
   ಈ) ಕಿನ್ನರ, ಯಕ್ಷ

3. 'ಜವ' ಪದದ ನಾನಾರ್ಥಗಳು_____
   ಅ) ಹಗಲು, ಇರುಳು
   ಆ) ಸಂಜೆ, ಮುಂಜಾನೆ
   ಇ) ಯಮ, ವೇಗ
   ಈ) ಯಶಸ್ಸು, ನಾಶ

4. 'ಚಣ' ಪದದ ತದ್ಭವ ರೂಪ_____
   ಅ) ಕಣ
   ಆ) ಮಣ
   ಇ) ಕ್ಷಣ
   ಈ) ಋಣ

5. 'ಮೈದೋರು' ಪದದ ಬಿಡಿಸಿ ಬರೆದ ಸರಿಯಾದ ರೂಪ_____
   ಅ) ಮೈ+ತೋರು
   ಆ) ಮೈ+ದೋರು
   ಇ) ಮೈ+ಓರು
   ಈ) ಮೈ+ಊರು

6. ಇದು ದ್ವಿರುಕ್ತಿಗೆ ಉದಾಹರಣೆಯಾಗಿದೆ.
   ಅ) ಓಡೋಡಿ
   ಆ) ಕಂಗೊಳಿಸು
   ಇ) ಸಿಡಿಮಿಡಿ
   ಈ) ಸರಸರ

7. 'ದನುಜ' ಪದದ ವಿರುದ್ಧಾರ್ಥಕ ಪದ_____
   ಅ) ಅನುಜ
   ಆ) ಮನುಜ
   ಇ) ರಾಕ್ಷಸ
   ಈ) ಅಗ್ರಜ
8. ಶಿವ ಮೆಚ್ಚಿದ ವಾದ್ಯ_____
   ಅ) ವೀಣೆ
   ಆ) ಮದ್ದಳೆ
   ಇ) ಮಡಕೆ
   ಈ) ಕೊಳಲು
9. ಪರುಷ ಮುಟ್ಟಲು ಇದು ಕನಕವಾಗುತ್ತದೆ.
   ಅ) ಕಬ್ಬಿಣ
   ಆ) ಹಂಚು
   ಇ) ಮರ
   ಈ) ಕಲ್ಲು
10. ಸರ್ವಜ್ಞನ ಪ್ರಕಾರ ಇವನು ನಾಡನರಿ.
   ಅ) ಅರಸ
   ಆ) ಮಂತ್ರಿ
   ಇ) ಸೈನಿಕ
   ಈ) ಬರೆವಾತ
11. 'ನೇಮದೊಳು ನೆಲೆಸುವುದು' ಪದ್ಯವು ಸಾಹಿತ್ಯದ ಈ ಪ್ರಕಾರಕ್ಕೆ ಸೇರುತ್ತದೆ.
   ಅ) ಚಂಪೂ
   ಆ) ತ್ರಿಪದಿ
   ಇ) ಸಾಂಗತ್ಯ
   ಈ) ಷಟ್ಪದಿ
12. ಜಲಗಾರನ ಆರತಿ_____
   ಅ) ಪೊರಕೆ
   ಆ) ಕರ್ಪೂರ
   ಇ) ಹಣ
   ಈ) ಕತ್ತಿ
13. ರೈತ ಶಿವನನ್ನು ನೋಡಲು ಇಲ್ಲಿಗೆ ಹೊರಟಿದ್ದಾನೆ.
   ಅ) ಹೊಲಕ್ಕೆ
   ಆ) ಶಿವಗುಡಿಗೆ
   ಇ) ಕಾಡಿಗೆ
   ಈ) ಮನೆಗೆ
14. ಶಿವನು ಇವನ ಬಂಧು.
   ಅ) ಜಲಗಾರ
   ಆ) ಅರ್ಚಕ
   ಇ) ರೈತ
   ಈ) ಬ್ರಾಹ್ಮಣ
15. ಕುವೆಂಪುರವರ ಈ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.
   ಅ) ಶ್ರೀ ರಾಮಾಯಣ ದರ್ಶನಂ

ಆ) ನೆನಪಿನ ದೋಣಿಯಲ್ಲಿ
ಇ) ಮಲೆಗಳಲ್ಲಿ ಮದುಮಗಳು
ಈ) ಕೊಳಲು

**II ಹೊಂದಿಸಿ ಬರೆಯಿರಿ** **1x5=5**

16. ಅರಿಲ್ –ಬೆಂಕಿ
17. ಅಗ್ನಿ –ನಿಚ್ಚ
18. ಕೊಂಡಾಡು –ರಾಕ್ಷಸ
19. ಅರಸು –ಬೆಂಕಿ
20. ನಿತ್ಯ –ನಕ್ಷತ್ರ

–ಹೊಗಳು

**III ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **1x10=10**

21. ನೀರಿನ ಗುಳ್ಳೆಯಂತೆ ಒಡೆದು ಹೋಗುವುದು ಯಾವುದು?
22. ದೇವಾಸುರರು ಯಾರ ವಿರುದ್ಧ ಹೋರಾಡಲಾರರು?
23. ಶಿವನು ಯಾರ ಜೊತೆ ಕುಣಿದನು?
24. ಪರಮ ತತ್ತ್ವಜ್ಞಾನ ಯಾರಿಗೆ ಇಲ್ಲ?
25. ಯಾವುದಕ್ಕೆ ಉದಾರತೆ ಇರಬೇಕು?
26. ಮಂಗನಂತೆ ಆಡುವವರು ಯಾರು?
27. ಯಾರ ಬಳಿಯಲ್ಲಿ ಕೋಪಿಸಿಕೊಳ್ಳಬಾರದು?
28. ಬೆಕ್ಕು ಯಾವುದಕ್ಕಾಗಿ ಹೊಂಚಿ ಬಂದಿತು?
29. ಜನಕೆ ಯಾವುದರ ಮಂಕು ಬಡಿದಿದೆ?
30. ಬೀದಿಗುಡಿಸುವ ಬಡವನ ಎದೆಯಲ್ಲಿ ಯಾರಿದ್ದಾರೆ?

ಆ–ವಿಭಾಗ

**IV ಕೆಳಗಿನವುಗಳಲ್ಲಿ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

31. ಕೋಪಗೊಂಡ ಶಿವನು ಅರ್ಜುನನನ್ನು ತುಳಿದಾಗ ಏನಾಯಿತು?
32. ಮಡಕೆಗಳನ್ನು ಮಾಡುವಾಗ ಗುಂಡಯ್ಯನಿಗೆ ಯಾವುದರೆಡೆಗೆ ಲಕ್ಷ್ಯವಿರಲಿಲ್ಲ?
33. ಮಾಯೆಯು ಕನಸಿನ ಬಗ್ಗೆ ಮಾತನಾಡಿದಾಗ ಅಲ್ಲಮ ಕೊಡುವ ಕಾರಣಗಳೇನು?
34. ಯಾರ್‍ಯಾರು ವಿಶ್ವಾಸಕ್ಕೆ ಅರ್ಹರಲ್ಲ?
35. ಸರ್ವಜ್ಞನ ಪ್ರಕಾರ ಹೊಲೆಯನು ಯಾರು?
36. ಕುವರ ಮತ್ತು ಕುವರಿಯರ ಬಗ್ಗೆ ಹೊನ್ನಮ್ಮನ ಅಭಿಪ್ರಾಯವೇನು?

**V ಕೆಳಗಿನವುಗಳಲ್ಲಿ ಮೂರು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** **3x3=9**

37. 'ಸುರಕಾಮಿನಿ ರಂಗದೊಳದೃಶ್ಯೆಯಪ್ಪುದುಮ್'
38. 'ನಿಮ್ಮುವನಾಡಿಪ ಭಕ್ತನದಾವಂ'
39. 'ಕಬ್ಬುನವಾದಡೆ ಪರುಷ ಮುಟ್ಟಲು ಕನಕವಹುದು'
40. 'ಸುಳ್ಳು ಈ ಮಾತು ಎನಬೇಡ'
41. 'ಸೇವಕರನು ಸೈರಣೆಗೊಂಡು ಸಂತವಿಸು'

**VI ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ.** **4x2=8**

42. ಕಿರಾತಾರ್ಜುನ ಕಥಾನಕದ ಸಂದೇಶವನ್ನು ವಿವರಿಸಿ.

43. ಗುಂಡಯ್ಯನ ಭಕ್ತಿಗೆ ಮೆಚ್ಚಿ ಶಿವ ಕುಣಿದ ಬಗೆಯನ್ನು ವಿವರಿಸಿ.
44. ಸರ್ವಜ್ಞನ ತ್ರಿಪದಿಗಳಲ್ಲಿ ಕಂಡುಬರುವ ಸಾರ್ವಕಾಲಿಕ ಮೌಲ್ಯಗಳನ್ನು ಸಂಗ್ರಹಿಸಿ ಬರೆಯಿರಿ.
45. ಸತಿ–ಪತಿ ಧರ್ಮದ ಬಗ್ಗೆ ಸಂಚಿ ಹೊನ್ನಮ್ಮನ ಅಭಿಪ್ರಾಯವೇನು?

**VII ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ.** **4x1=4**

46. ಎನಿಸಿದ ನೀಳಾಂಜನೆ ಕ
ರ್ಬಿನ ಬಿಲ್ಲಿಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳ ಜನಾಂತರಂಗಮಂ ರಂಗಮುಮಂ

47. ಗುರುವಿಗೆ ದೈವಕ್ಕೆ ಧರ್ಮಕ್ಕೆ ದಾನಕ್ಕೆ
ಪರಪುರುಷಾರ್ಥಕೀಯದನ
ಪಿರಿದರ್ಥಂ ವ್ಯರ್ಥಮಲ್ಲವೆ ರಂಗೇಶ
ಪರಮೋದಾರತೆ ಪೂಜ್ಯಮಿಳೆಗೆ

ಇ–ವಿಭಾಗ

**VIII ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x2=4**

48. ಕವಿ ಊರನ್ನು ಹೇಗೆ ವರ್ಣಿಸುತ್ತಾನೆ?
49. ಬೆಕ್ಕಿನ ಸ್ವರವನ್ನು ಆಲಿಸಿದವರು ಯಾರು?
50. ತಂದೆ ತಾಯಿ ನಾಗಿಯನ್ನು ಹೇಗೆ ಹುಡುಕಿದರು?

**IX ಕೆಳಗಿನವುಗಳಲ್ಲಿ ಒಂದನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** **3x1=3**

51. 'ನಿಲ್ಲು ನಾಗಿ ನಿಲ್ಲು ನೋಡಬೇಕು ನಿನ್ನ'
52. 'ದೀಪ ನಿಲ್ಲಬಹುದೆ ಇಲ್ಲಿ ಗಾಳಿ ಬಂದು ಮುತ್ತಲು'

**X ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ.** **4x1=4**

53. ನಾಗಿ ತೇರು ನೋಡಲು ಹೊರಟ ಪ್ರಸಂಗವನ್ನು ವರ್ಣಿಸಿರಿ.
54. ಪ್ರೇಮದ ಆಕರ್ಷಣೆಗೆ ಒಳಗಾದ ನಾಗಿಯದು ದುರಂತ ಕಥೆಯೇ? ಚರ್ಚಿಸಿರಿ.

ಈ–ವಿಭಾಗ

**XI ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** **2x2=4**

55. ಜಲಗಾರನ ಶಿವ ಎಲ್ಲಿದ್ದಾನೆ?
56. ಗುಡಿಗಳು ಯಾರ ಗೂಡುಗಳು ಎಂದು ತಿರುಕ ಹೇಳುತ್ತಾನೆ?
57. ಊರತೋಟಿ ಮತ್ತು ಜಗದ ತೋಟಿಗಳಾರು?

**XII ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** **3x2=6**

58. 'ದೂರದಲ್ಲಿಯೇ ನಿಂತು ಕೈಮುಗಿದು ಬಾ'
59. 'ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ'
60. 'ಅಂಜದಿರು ಸೋದರನೆ ನಾ ನಿನ್ನ ಬಂಧು'

**XIII ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ.** **4x1=4**

61. ಶಿವ ಎಲ್ಲಿದ್ದಾನೆ ಎಂದು ಜಲಗಾರ ಹೇಳುತ್ತಾನೆ? ವಿವರಿಸಿ.
62. ಜಗದ ಜಲಗಾರ ಯಾರು? ವಿವರಿಸಿ.

ಉ–ವಿಭಾಗ

**XIV ಕೆಳಗಿನವುಗಳಲ್ಲಿ ಎರಡರ ಕುರಿತು ಟಿಪ್ಪಣಿ ಬರೆಯಿರಿ.** **2x2=4**

63. ರಗಳೆ
64. ವಿಮಳೆ
65. ಸರ್ವಜ್ಞ

ಊ–ವಿಭಾಗ

**XV ಕೆಳಗಿನವುಗಳಲ್ಲಿ ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಿಸಿ ಛಂದಸ್ಸಿನ ಹೆಸರನ್ನು ಬರೆಯಿರಿ.** **4x1=4**

66. ಎನಿತೊಡಲಂ ತಾಳ್ದಿದುದಿ
ಲ್ಲೆನಿತೊಡಲಂ ಬಿಸುಟುದಿಲ್ಲ ವಿಷಯಾನಳನಿಂ
ದೆನಿತೆನಿತಂ ಮರುಗಿದುದಿ
ಲ್ಲನಂತಸಂಸಾರ ಗಹನದೊಳ್ ಜೀವಂಗಳ್

67. ಅರಸ ರಕ್ಕಸನಂತೆ ವರಮಂತ್ರಿ ಹುಲಿಯಂತೆ
ಬರೆವಾತ ನಾಡ ನರಿಯಂತೆ ಪರಿವಾರ
ಗರಗಸದಂತೆ ಸರ್ವಜ್ಞ

**XVI ಕೆಳಗಿನವುಗಳಲ್ಲಿ ಒಂದಕ್ಕೆ ಅಲಂಕಾರ ಹೆಸರಿಸಿ, ಸಮನ್ವಯಗೊಳಿಸಿ.** **4x1=4**

68. ಸೌದಾಮಿನಿವೋಲ್ ಭೋಂಕನೆ ಸುರಕಾಮಿನಿ ರಂಗದೊಳದೃಶ್ಯೆಯಪ್ಪುದುಮಾಗಳ್
69. ಮೃದುನುಡಿ ಮನುಜರ ಹೃದಯಾಕರುಷಣ
ಮೃದುನುಡಿ ಇಹಪರ ಸೌಖ್ಯ
ಮೃದುನುಡಿಯಿಂ ಲೋಕ ಪೂಜ್ಯತೆ ರಂಗೇಶ
ಮೃದುನುಡಿಗೆಣೆಯದಿನ್ನುಂಟೆ

**XVII ಕೆಳಗೆ ಕೊಟ್ಟಿರುವ ಹಳಗನ್ನಡ ಪದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ ಬರೆಯಿರಿ.** **4x1=4**

70. ಪರಮಶಿವಾಗಮೋಕ್ತವಿಧಿಯಿಂ ಮಣಲಿಂ ನೆಗಟ್ದೊಂದು ಲಿಂಗಮಂ
ನಿರುಪಮಭಕ್ತಿಯಿಂ ತಿಳಿದು ಪಡ್ಡಳಿ ಬಂದುಗೆ ಕಕ್ಕೆ ಮುತ್ತ ಪಾ
ದರಿಗಳ ಪೂಗಳಂ ಮೃದುಳಬಿಲ್ವದಳಂಗಳನಲ್ಲಿ ತಂದು ಶಂ
ಕರನನೊಲಿಲ್ದು ಪೂಜಿಸಿದನರ್ಥಿತವೈರಿಜಯಂ ಧನಂಜಯಂ